ದಿನಾಂಕಃ 27-11-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ **7(ಎ)** ರಿಂದ **(ಡಿ), 8** ರಿಂದ **12** ಮತ್ತು **14** ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ಎಸ್.ಎಸ್.ಎಲ್ ಸಿ ವರಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಜನ್ಮ ದಿಃ 1.6.1962 ಆಗಿರುತ್ತದೆ. ಈ ದಾವೆಯನ್ನು ನಾನೇ ಹಾಕಿದ್ದೇನೆ. ದಾವೆ ಎಂದರೆ ಏನು ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿ ಕೇಸು ಹಾಕುವುದು ಎಂದು ಉತ್ತರಿಸಿರುತ್ತಾರೆ. ಅಣ್ಣತಮ್ಮಂದಿರ ವಿರುದ್ಧ ಹಾಕಿದ್ದೇನೆ. 37 ಎಕರೆ ಜಮೀನಿನ ಮೇಲೆ ಹಾಕಿದ್ದೇನೆ. ಈ ದಾವೆಯನ್ನು ದಾಖಲು ಮಾಡಲು ನಾನೇ ಮಾಹಿತಿ ಕೊಟ್ಟಿದ್ದೇನೆ. 4 ಜಮೀನುಗಳಿಗೆ ಸಂಭಂದಿಸಿದಂತೆ ದಾವೆ ಹಾಕಿದ್ದೇನೆ. ದಾವಾ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ದಾವಾ ಸ್ವತ್ತುಗಳು ಎಲ್ಲಾ ನೀರಾವರಿ ಜಮೀನುಗಳು ಇತ್ತು ಎಂದರೆ ಸಾಕ್ಷಿ ಮೊದಲು ಒಣಬೇಸಾಯವಿದ್ದು, ನಂತರ ನಾಲೆಯ ನೀರು ಒಂದು ನೀರಾವರಿ ಜಮೀನುಗಳು ಆಗಿರುತ್ತವೆ. ಸರ್ವೆ ನಂ.61 ರಲ್ಲಿ ಒಂದು ಭಾವಿ ಇದೆ. ಸರ್ವೆ ನಂ.92 ರಲ್ಲಿ ಒಂದು ಭಾವಿ ಇರುತ್ತವೆ. ಸರ್ವೆ ನಂ.92 ರಲ್ಲಿ ನನ್ನ ಅಜ್ಜ ಭಾವಿ ತೆಗೆಸಿರುತ್ತಾರೆ. ಸರ್ವೆ ನಂ.61 ರಲ್ಲಿ ನನ್ನ ತಂದೆ ಭಾವಿ ತೆಗೆಸಿರುತ್ತಾರೆ. ಸರ್ವೆ ನಂ. 61 ರಲ್ಲಿ ಇದ್ದ ಭಾವಿಯಲ್ಲಿ 1 ಎಕರೆಗೆ ನೀರು ಹರಿಯುತ್ತಿತ್ತು, ಸರ್ವೆ ನಂ. 92 ರಲ್ಲಿ ಇದ್ದ ಭಾವಿಯಲ್ಲಿ 2 ಎಕರೆಗೆ ನೀರು ಹರಿಯುತ್ತಿತ್ತು. ಸದರಿ ಜಮೀನುಗಳಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸಾಕ್ಷಿ ಇಲ್ಲ ಹೊಟ್ಟೆ ಬಟ್ಟೆಗೆ ಸಾಕಾಗುತ್ತಿತ್ತು ಎನ್ನುತ್ತಾರೆ. ಈ ರೀತಿ ಆದಾಯ ಬರುತ್ತಿರಲಿಲ್ಲವೆಂದು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ನೀರಾವರಿ ಜಮೀನುಗಳಿಂದ ಸಾಕಷ್ಟು ಉತ್ಪನ್ನ ಬರುತ್ತಿತ್ತು ಎಂದರೆ ಸರಿಯಲ್ಲ.

2. ನನ್ನ ತಂದೆಗೆ ನಾನೇ ಹಿರಯಮಗ ಅಲ್ಲ ನನಗಿಂದ ದೊಡ್ಡವ ಸಿದ್ದಪ್ಪ ರಾಮಪ್ಪ ಇದ್ದು ಅವರು ತೀರಿಕೊಂಡಿದ್ದಾರೆ. ನನ್ನ ಕುಟುಂಬದಲ್ಲಿ ನಾನೊಬ್ಬನೇ ಶಾಲೆ ಕಲೆತಿಲ್ಲ ನನ್ನ ಇಬ್ಬರು ತಮ್ಮಂದಿರು ಕಲಿತಿದ್ದಾರೆ. 1988 ರಲ್ಲಿ ನಾನು ಪಿ.ಕೆ.ಪಿ.ಎಸ್ ಸೊಸಾಯಿಟಿಯಲ್ಲಿ ಗುಮಾಸ್ತನಾಗಿ ಸೇರಿಕೊಂಡೆ. ಆಗ ನನಗೆ ವೇತನ ತಿಂಗಳಿಗೆ

ರೂ.400/- ಕೊಡುತ್ತಿದ್ದರು. ಈ ಬಗ್ಗೆ ದಾಖಲೆ ಇಲ್ಲ. ನನಗೆ ರೂ.400/- ವೇತನ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಗುಮಾಸ್ತನಾಗಿ 4-5 ವರ್ಷ ಕೆಲಸ ಮಾಡಿದೆ. ಕಾರ್ಶಯದರ್ಶಿಯಾಗಿ 20 ವರ್ಷ ಕೆಲಸ ಮಾಡಿದೆ. ಕಾರ್ಯದರ್ಶಿಯಾಗಿ ಕೆಲಸ ಮಾಡುವಾಗ ನನಗೆ ರೂ.500/- ಕೊಡುತ್ತಿದ್ದರು. ಈ ಬಗ್ಗೆ ತೋರಿಸಲು ಯಾವುದೇ ದಾಖಲೆ ಇಲ್ಲ. ಈಗ 2 ವರ್ಷದಿಂದ ನಾನು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿಲ್ಲ. ಸಾಕ್ಷಿಯ ಕೈಯಲ್ಲಿ ತನ್ನ ಸಾಕ್ಷ್ಯಪ್ರಮಾಣವನ್ನು ನೀಡಿ ಅದರಲ್ಲಿ ಇರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದಿರಾ ಎಂದರೆ ಸಾಕ್ಷಿ ಓದಿ ನಂತರ ಸಹಿಯನ್ನು ಮಾಡಿದ್ದೇನೆ ಎನ್ನುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ